ಅಂತರ್ಜಾಲ : https://kptcl.karnataka.gov.in ಇ-ಮೇಲ್ ವಿಳಾಸ: admin@kptcl.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.

ಕವಿಪ್ರನಿನಿ/ಬಿ31/ಅಇಂ(ಐಟಿ)/33870/2022-23 ದಿನಾಂಕ: 04/2/23

## ಸುತ್ತೋಲೆ

ವಿಷಯ:- ನಿಗಮದಲ್ಲಿ ERP ಯೋಜನೆಯ ಅನುಷ್ಠಾನಕ್ಕೆ ಮಾಹಿತಿಗಳನ್ನು ಗಣಕೀಕರಣಗೊಳಿಸುವ ಬಗ್ಗೆ.

ಉಲ್ಲೇಖ:- LoI No.CEE/T&P/SEE/EE(P)/AEEP4/2022-23/14269-81 Dated:18.11.2022.

***********

ಪ್ರಸ್ತುತ ಕವಿಪ್ರನಿನಿಯಲ್ಲಿ ERPಯನ್ನು ಅನುಷ್ಠಾನಗೊಳಿಸುವ ಕಾರ್ಯವು ಚಾಲನೆಗೊಂಡಿದ್ದು, ಎಲ್ಲಾ ಕಛೇರಿ ವ್ಯವಹಾರಗಳನ್ನು ಗಣಕೀಕರಣಗೊಳಿಸುವ ಕಾರ್ಯವನ್ನು ಕೈಗೆತ್ತುಗೊಳ್ಳಬೇಕಾಗಿರುತ್ತದೆ, ಸದರಿ ಯೋಜನೆಯನ್ನು M/s. Enzen Global Solutions ಸಂಸ್ಥೆಗೆ ನೀಡಲಾಗಿದ್ದು, M/s.Ernst and Young LLP ಸಂಸ್ಥೆಯು ಯೋಜನಾ ನಿರ್ವಹಣಾ ಸಲಹಾ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ERP ತಂತ್ರಾಂಶವನ್ನು ಅಳವಡಿಸಿಕೊಳ್ಳಲು ಈ ಕೆಳಕಂಡ ಪ್ರಮುಖ ಐದು ಮಾಡ್ಯೂಲ್‌ಗಳನ್ನು (Module) ಜಾರಿಗೆ ತರಲು ಉದ್ದೇಶಿಸಲಾಗಿದೆ.

I.ಫೈನಾನ್ಷಿಯಲ್ ಅಕೌಂಟಿಂಗ್ & ಕಂಟ್ರೋಲಿಂಗ್ (Financial Accounting & Controlling)

II.ದಾಸ್ತಾನು, ಸಂಗ್ರಹಣೆ ಮತ್ತು ಗುತ್ತಿಗೆ ನಿರ್ವಹಣೆ (Inventory, Procurement and Contracts Management )

III.ಆಸ್ತಿ ಮತ್ತು ನಿರ್ವಹಣೆ ನಿರ್ವಹಣೆ (Asset and Maintenance Management)

IV.ಯೋಜನೆ ಮತ್ತು ಯೋಜನಾ ಮೇಲ್ವಿಚಾರಣೆ (Planning and Project Monitoring)

V.ಮಾನವ ಸಂಪನ್ಮೂಲ ನಿರ್ವಹಣೆ (Human Resource Management)

ಮುಂದುವರೆದು, ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿಗಳನ್ನು ನೀಡಬೇಕಾಗಿರುತ್ತದೆ.

1. Enzen Global Solutions ಸಂಸ್ಥೆಯು ಗಣಕೀಕರಣದ ಜವಾಬ್ದಾರಿಯನ್ನು ನಿರ್ವಹಿಸುತ್ತದೆ.
2. ಮಾಹಿತಿ/ಕಡತಗಳನ್ನು M/s Enzen Global Soluions ಸಂಸ್ಥೆಗೆ ಹಸ್ತಾಂತರಿಸುವುದು ಮತ್ತು ಗಣಕೀಕರಣ ಮುಗಿದ ನಂತರ ತಾವೇ ಮಾಹಿತಿ/ಕಡತಗಳನ್ನು ವಾಪಸ್ ಪಡೆದುಕೊಂಡು ಸಂರಕ್ಷಿಸುವುದು ಅಧಿಕಾರಿಗಳ ಜವಬ್ದಾರಿಯಾಗಿರುತ್ತದೆ.
3. ಕವಿಪ್ರನಿನಿಯ ಎಲ್ಲಾ ಶಾಖೆಗಳ/ವಿಭಾಗಗಳಲ್ಲಿ ಗಣಕೀಕರಣಕ್ಕೆ ಒದಗಿಸಬೇಕಾದ ಅವಶ್ಯಕ ಮಾಹಿತಿಗಳು/ ಕಡತಗಳು ಯಾವ ದಿನಾಂಕದಿಂದ ಗಣಕೀಕರಣ ಮಾಡಬೇಕಾಗಿರುವ ಅವಧಿಯ ಪ್ರಮಾಣವನ್ನು ಮಾಹಿತಿ ಹಕ್ಕು ಕಾಯ್ದೆ-2005 ಹಾಗೂ ನಿಗಮದ ನಿಯಮಾವಳಿಗಳ ಪ್ರಕಾರ ತಮ್ಮ ಕಛೇರಿಯ ಹಂತದಲ್ಲಿಯೇ ನಿರ್ಧರಿಸುವುದು.

ERP ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕವಿಪ್ರನಿನಿಯ ಎಲ್ಲಾ ಶಾಖೆಯ/ವಿಭಾಗಗಳ ಮಾಹಿತಿಗಳನ್ನು ಗಣಕೀಕರಣಗೊಳಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ನಿಗಮದ ಕಾರ್ಯಗಳನ್ನು ಸರಾಗಗೊಳಿಸಲು, ತಮ್ಮ ಶಾಖೆಯಲ್ಲಿ ಲಭ್ಯವಿರುವ ಕಡತಗಳನ್ನು/ಮಾಹಿತಿಗಳನ್ನು ಮೇಲಿನ ಅಂಶಗಳನ್ನು ಪರಿಗಣಿಸಿ ಗಣಕೀಕರಣಕ್ಕೆ ಒದಗಿಸಬೇಕಾಗಿದ್ದು, ಅವಶ್ಯಕ ಮಾಹಿತಿಗಳನ್ನು ಮುಂಚಿತವಾಗಿಯೇ ಸಿದ್ಧಪಡಿಸಿಟ್ಟುಕೊಂಡು, M/s Enzen ಸಂಸ್ಥೆಗೆ ಒದಗಿಸುವ ಸೂಕ್ತ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ.

10/02/23

ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ),

ನಿಗಮ ಕಾರ್ಯಾಲಯ,ಕವಿಪ್ರನಿನಿ.

ಪ್ರತಿಗಳು:-

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ,
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ,
3. ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು.
4. ಉಪ ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), (ಐ,ಟಿ) ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.-ಸದರಿ ಅಧಿಕೃತ ಜ್ಞಾಪನವನ್ನು ನಿಗಮದ ಅಂರ್ತಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
7. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ)/(ಸಿ), ಕವಿಪ್ರನಿನಿ.
8. ಎಲ್ಲಾ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಆಡಳಿತಾಧಿಕಾರಿ, ಮಾ.ಸಂ.ಆ.ಕೇಂದ್ರ, ಕವಿಪ್ರನಿನಿ,ಹೂಡಿ, ಬೆಂಗಳೂರು.
10. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/(ಸಿ), ಕವಿಪ್ರನಿನಿ.
11. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
12. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು( ಆ ಮತ್ತು ಮಾ.ಸಂ), ಕವಿಪ್ರನಿನಿ, ಬೆಂಗಳೂರು.
13. ಸಂಬಂಧಪಟ್ಟ ಅಧಿಕಾರಿಗಳಿಗೆ.
14. ಮುಖ್ಯ ಕಡತಕ್ಕೆ.